೬. ಶಾಸನ ರಚನೆ

ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ ೨೦೦೦

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, 2000ದ ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''2000ದ ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, 2000ದ ನಿರ್ದಿಷ್ಟ ಕಾನೂನುಗಳನ್ನು ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು ★ ವಿಧೆಯಯಕವನ್ನು ಮಂಡಿಸಲಾಗಿದೆ.

ಶ್ರೀ ಬಿ.ಬಿ.ಶಿವಪ್ಪ: ನನ್ನದು ಒಂದು ವಿಷಯವನ್ನು ಶೂನ್ಯವೇಳೆಯಲ್ಲಿ ಕೇಳಿದ್ದ. ಅದೇನಾಯಿತೋ ಗೊತ್ತಾಗಲಿಲ್ಲ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ. ಒಂದು ದಿವಸಕ್ಕೆ, ಶೂನ್ಯವೇಳೆಯಲ್ಲಿ ಸಂಬಂಧಪಟ್ಟ ವಿಷಯಗಳನ್ನು ನಾಲ್ಕನ್ನು ತೆಗೆದುಕೊಳ್ಳೋಣ. ಇವತ್ತು ನಾಲ್ಕು ಆಗಿದೆ. ನಾಳೆ ನಾಲ್ಕನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಬಿ.ಶಿವಪ್ಪ: ನಾಳೆ ತಾವು ಹಾಕಿಕೊಂಡರೆ, ನಾವು ನಾಳೆ ಕೇಳಬೇಕೆನ್ನುವ ವಿಷಯ ಮತ್ತೆ ಮುಂದೆ ಹೋಗುತ್ತದೆ. ಒಂದು ದಿವಸದಲ್ಲಿ ಎರಡನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೀರಾ? ಒಂದು ದಿವಸದಲ್ಲಿ ಎರಡು ಶೂನ್ಯ ವೇಳೆಗೆ ಅವಕಾಶ ಕೊಡುವುದಿಲ್ಲ.